ಪಿ ಡಬ್ಲೂ: **1**

<u>ದಿಃ **20.09.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಬಿ ಹೆಚ್ ವಕೀಲರಿಂದಃ</u>

ನನ್ನ ತಂದೆ ಮಾರಾಟ ಮಾಡಿರುವ ಪಿತ್ರಾರ್ಜಿತ ಸ್ವತ್ತುಗಳು ಹೊರತು ಪಡಿಸಿ ಇತರೆ ಪಿತ್ರಾರ್ಜಿತ ಸ್ವತ್ತುಗಳು ಸಹಾ ಇದ್ದು ಅವುಗಳ ಮೇಲೆಯು ಇನ್ನೂ ಯಾವುದೇ ದಾವೆಯನ್ನು ಹೂಡಿರುವುದಿಲ್ಲ. ಸಾಕ್ಷಿಗೆ 1 ಅಡಮಾನ ಪತ್ರವನ್ನು ತೋರಿಸಿ ಅದರಲ್ಲಿರುವ ಪೋಟೋ ಗರುತಿಸಲು ಹೇಳಲಾಗಿ ಸಾಕ್ಷಿ ನನ್ನ ತಂದೆಯ ಭಾವಚಿತ್ರ ಎಂದು ಗುರುತಿಸಿರುತ್ತಾರೆ ಆ ಮೇರೆಗೆ ಸದರಿ ದಾಖಲಾತಿಯನ್ನು ನಿಡಿ **2** ಎಂದು ಹಾಗೂ ಅದರಲ್ಲಿರುವ ಭಾವಚಿತ್ರವನ್ನು ನಿಡಿ **2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ05.05.2015 ರ ಆದಾರ ಖುಲಾಸೆ ಪತ್ರದ ಅಸಲು ಪ್ರತಿ ಹಾಗೂ ಅದರಲ್ಲಿರುವ ಭಾವಚಿತ್ರವನ್ನು ತೋರಿಸಿ ಕೇಳಲಾಗಿ ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಆಧಾರ ಖುಲಾಸೆ ಪತ್ರವನ್ನು ನಿಡಿ **3** ಎಂದು, ಅದರಲ್ಲಿರುವ ಭಾವಚಿತ್ರವನ್ನು ನಿಡಿ **3** (ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಆದಾರ ಖುಲಾಸೆ ಪತ್ರದಲ್ಲಿನ ಸ.ನಂ.2/1ರ ಸ್ವತ್ತಿನ ಕುರಿತು ಈಗ ವ್ಯಾಜ್ಯ ನಡೆಯುತ್ತಿರುವುದು ಎಂದು ನುಡಿಯುತ್ತಾರೆ. ನಿಡಿ 1 ರಲ್ಲಿ ತಿಳಿಸಿರುವಂತೆ ಹೆಚ್ ಎಂ ಸಮೀರ್ ಹುಸೇನ್ ಎಂಬುವವರು 1ನೇ ಪ್ರತಿವಾದಿಗೆ ರೂ. 1 ಲಕ್ಷ 75 ಸಾವಿರಕ್ಕೆ ದಾವಾಸ್ವತ್ತನ್ನು ಶುದ್ದ ಕ್ರಯ ಪತ್ರಕ್ಕೆ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ( ವಕೀಲರು ನಿಡಿ 1ರಲ್ಲಿನ ಹಣ ವ್ಯವಹಾರದ ಅಂಶಗಳನ್ನು ಓದಿ ಹೇಳಿ ಸದರಿ ನಿಡಿ 1ರ ಕ್ರಯ ಪತ್ರದಲ್ಲಿ 1 ಲಕ್ಷ 75 ಸಾವಿರ ರೂ.ಗಳನ್ನು 1ನೇ ಪ್ರತಿವಾದಿ ಸ್ವೀಕರಿಸಿರುವುದಾಗಿ ಸದರಿ ಪತ್ರದಲ್ಲಿ ನಮೂದಾಗಿರುತ್ತದೆ ಎಂದು ಕೇಳಲಾಗಿ ಸಾಕ್ಷಿಯು ಅದನ್ನು ಓದಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. )

ನಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ ಅದರೆ ಸದರಿ ಜಮೀನುಗಳನ್ನು ವಾರಕ್ಕೆ ಬೋಗ್ಯದಂತೆ ನೀಡಿರುತ್ತೇವೆ. ದಿಃ23.12.2003ರ ಕ್ರಯ ಪತ್ರದಲ್ಲಿನ ಭಾವಚಿತ್ರ, ಸಹಿ ಹಾಗೂ ಹೆಬ್ಬೆಟ್ಟಿನ ಗುರುತು ಇದ್ದರು ಸಹಾ ಅದನ್ನು ಉದ್ದೇಶಪೂರ್ವಕವಾಗಿ ಗುರುತಿಸದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಭಿಪ್ರಾಯದಂತೆ ದಿ:23.12.20003ರ ಕ್ರಯ ಪತ್ರದಲ್ಲಿನ ನನ್ನ ಭಾವಚಿತ್ರ, ಸಹಿ ಹಾಗೂ ಹೆಬ್ಬೆಟ್ಟಿನ ಗುರುತು ಫೋರ್ಜರಿಯಾಗಿರುತ್ತದೆ ಎಂದರೆ ಸರಿ. ಅದರಂತೆ ಸದರಿ ಕ್ರಯ ಪತ್ರದಲ್ಲಿನ ಭಾವಚಿತ್ರ, ಸಹಿ ಹಾಗೂ ಹೆಬ್ಬೆಟ್ಟಿನ ಗುರುತನ್ನು ಎಫ್ ಎಸ್ ಎಲ್ ವರದಿಗಾಗಿ ಕಳುಹಿಸಲು ನನಗೆ ಯಾವುದೇ ಅಭ್ಯಂತರವಿಲ್ಲ. ಅದೇ ದಿನ ದಿ:23.12.2003 ರಂದು ಸ.ನಂ.34, ಖಾತಾ ನಂ. 110, 111 ಸ್ವತ್ತುಗಳಿಗೆ ಸಂಬಧಿಸಿದಂತೆ ನಾನು ಹಾಗೂ ನನ್ನ ತಂದೆ ಅದೇ ವ್ಯಕ್ತಿಯಾದ ಹೆಚ್ ಎಂ ಸಮೀರ್ ಹುಸೇನ್ ರವರೊಂದಿಗೆ ಇನ್ನೊಂದು ಕ್ರಯ ಕರಾರನ್ನು ನೊಂದಣಿ ಪತ್ರದ ಮೂಲಕ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಯಾವುದೇ ದಾಖಲಾತಿ ನೊಂದಣಿ ಮಾಡಬೇಕಾದರೆ ಪಕ್ಷಗಾರರ ಭಾವಚಿತ್ರಗಳನ್ನು ಹಾಗುಾ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ತೆಗೆದುಕೊಂಡು ನೊಂದಣಿ ಮಾಡಲಾಗುತ್ತದೆ ಎಂದರೆ ಸರಿ. ಅದೇ ರೀತಿಯಾಗಿ ದಿ:23.12.2003 ರ ದಾಖಲಾತಿಯು ನೊಂದಣಿಯಾಗಿರುತ್ತದೆ ಎಂದರೆ ಸರಿಯಲ್ಲ.

ದಾವಾಸ್ವತ್ತನ್ನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ ನಾನು ಗುತ್ತಿಗೆಗೆ ನೀಡಿ ಬೇರೆಯವರೊಂದಿಗೆ ಉಳುಮೆ ಮಾಡಿಸುತ್ತಿದ್ದೇನೆ ಎಂದರೆ ಸರಿ. ಆ ಕುರಿತು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರು ಪಡಿಸಿರುವುದಿಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಾನು ಸರ್ಕಾರಕ್ಕೆ ಕೋವಿಡ್ ಬರುವ ಮುಂಚಿನವರೆಗೂ ಕಂದಾಯ ಪಾವತಿ ಮಾಡಿರುತ್ತೇನೆ. ದಾವಾಸ್ವತ್ತು ನಿಪಿ 1 ರಂತೆ 2 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ದಾವಾಸ್ವತ್ತಿಗೆ ಸಂಬಂಧಿಸಿದ ಕಂದಾಯ ಪಾವತಿಯನ್ನು ಈವರೆಗೂ ಪಾವತಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಬೇರೆಯವರಿಗೆ ದಾವಾಸ್ವತ್ತನ್ನು ಗುತ್ತಿಗೆಗೆ ನೀಡಿ ಉಳುಮೆ ಮಾಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನನ್ನ ತಂದೆ 2 ನೇ ಪ್ರತಿವಾದಿಗೆ ಮಾರಾಟ ಮಾಡುವ ಮೊದಲೇ ಸದರಿ ವ್ಯವಹರಣೆ ನನಗೆ ಗೊತ್ತಿದ್ದರೂ ಸಹಾ ಈಗ ಸ್ವತ್ತಿನ ಅಕ್ರಮ ಪಾಯಿದೆ ಹೊಂದುವ ಸಲುವಾಗಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 12 ರಿಂದ 17 ರ ದಾಖಲಾತಿಗಳಂತೆ ನಾವು ಸ್ವತ್ತುಗಳನ್ನ ಮಾರಾಟ ಮಾಡಿ ನಂತರ ಖರೀದಿ ಮಾಡಿದ ವ್ಯಕ್ತಿಗಳ ವಿರುದ್ಧ ಉದ್ದೇಶಪೂರ್ವಕವಾಗಿ ದಾವೆಯನ್ನು ಹೂಡುವ ಹವ್ಯಾಸ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಸಾ ಓ ಹೇ ಕೇ ಸ ಇ ಒ

(ಶ್ರೀಮತಿ ಮಮತ.ಪಿ.)
ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಅರಸೀಕೆರೆ.